

ಡಾ.ವಿನೋದ ಛೆಬ್ಬಿ

**ಆತ್ಮರಕ್ಷಣೆಗೆ ಒರಟುಭಾವ ಅಗತ್ಯವಾದರೆ ಅನ್ಯೋನ್ಯತೆಗೆ ಕೋಮಲ ಭಾವ ಬೇಕೇಬೇಕು.**

# 135: ಪತಿಯೆಂಬ ಮಗು-3

ಕೀರ್ತಿಯು ತನ್ನ ದಾಂಪತ್ಯದ ವೈರುಧ್ಯಗಳನ್ನು ಹೇಳಿಕೊಂಡಾಗ ಆಕೆಯ ಗಂಡನನ್ನು ನನ್ನ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಇಬ್ಬರಿಗೂ ಬರಲು ತಿಳಿಸಿದ್ದೆನಷ್ಟೆ?

ಕೀರ್ತಿ ಹಾಗೂ ಕಿಶೋರ ಮುಂದಿನ ವಾರ ಬರುತ್ತೇವೆ ಎಂದವರು ಕಡೆಯ ಕ್ಷಣದಲ್ಲಿ ರದ್ದುಮಾಡಿದರು. ಆಪ್ತಸಲಹೆಗೆಂದು ಒಪ್ಪಿಕೊಂಡವರ ಪೈಕಿ ಸುಮಾರು ಜನ ಸಮಯ ಪಾಲನೆ ಮಾಡುವುದಿಲ್ಲ. ಇದಕ್ಕೆ ಸುಪ್ತಮನದ ಎರಡು ಕಾರಣಗಳಿವೆ. ಒಂದು: ತಮ್ಮೊಳಗೆ ಬಚ್ಚಿಟ್ಟುಕೊಂಡ ನಿಜಾಂಶವು ಬಯಲಾದೀತು ಎಂಬ ಅಳುಕು. ಎರಡು: ನಿಷ್ಪ್ರಯೋಜಕ ನಡತೆಯನ್ನು ತಿದ್ದಿಕೊಳ್ಳುವುದಕ್ಕೆ ಪ್ರತಿರೋಧ. ಕಿಶೋರ ಕೂಡ ಇಂಥವ ಆಗಿರಬಹುದು ಎಂದುಕೊಂಡೆ. ಅಂತೂ ಮೂರನೆಯ ವಾರ ಕೀರ್ತಿಯು ಕಿಶೋರನನ್ನು ಕರೆದುಕೊಂಡು ಬಂದೇಬಿಟ್ಟಳು.

ಕಿಶೋರ ನನ್ನೆದುರು ಕೂತ ರೀತಿಯಿಂದಲೇ ಪ್ರತಿರೋಧ ಹೊರಹೊಮ್ಮಿಸುತ್ತಿದ್ದ. ನಾನು, 'ಇಲ್ಲಿಗೆ ಮನಸ್ಸಿಲ್ಲದೆ ಬಂದಿದ್ದೀರಿ, ಅಲ್ಲವೆ?' ಎಂದು ನಕ್ಕೆ. ಅವನು ಒಪ್ಪಲೋ ಬೇಡವೋ ಎನ್ನುತ್ತಿರುವಾಗ ಹೇಳಿದೆ: 'ಅಂದರೆ ಹೆಂಡತಿಯ ಸಲುವಾಗಿ ನಿಮಗೆ ಇಷ್ಟವಿಲ್ಲದ್ದನ್ನೂ ಮಾಡುತ್ತೀರಿ ಎಂದಾಯಿತು. ಒಳ್ಳೇದು!' ಅವನು ಸ್ವಲ್ಪ ನಿರಾಳವಾದ. ಆಗ ಅವನನ್ನು ಗಮನಿಸಿದೆ. ಮಕ್ಕಳಿಗೆ ಇರುವಂತೆ ತಲೆತುಂಬ ಕೂದಲು, ಗಡ್ಡ ಮೀಸೆ ಚೂರೂ ಇಲ್ಲದ ಹಾಲುಗಲ್ಲದ ಮುಖ ಧರಿಸಿದ್ದ. ಮಾತುಕತೆ ಶುರುವಾಯಿತು. ಮುಂಚೆ ಬರಲಾಗದ್ದಕ್ಕೆ ಕೀರ್ತಿ ವಿವರಿಸಿದಳು. ಆಕೆಗೆ ಮನಸ್ಸಿಲ್ಲದಿದ್ದರೂ ಕಾರು ಖರೀದಿಗೆ ಒಂದು ವಾರ, ಹಾಗೂ 'ನಮ್ಮ ತಕರಾರನ್ನು ನಾವೇ ಬಗೆಹರಿಸಿಕೊಳ್ಳೋಣ' ಎಂಬ ಕಿಶೋರನ ಆಗ್ರಹಕ್ಕೆ ಇನ್ನೊಂದು ವಾರ ಕಳೆಯಿತು. ಇವೊತ್ತು ಬಂದಿದ್ದೂ ಅವಳ ಒತ್ತಾಯಕ್ಕೆ.

ಕೀರ್ತಿ ಆರಂಭಿಸಿದಳು. ಕಿಶೋರ ತುಂಬಾ ಸುಳ್ಳು ಹೇಳುತ್ತಾನೆ, ಬಚ್ಚಿಡುತ್ತಾನೆ ಎಂದಳು. ಕಿಶೋರ ಸಾರಾಸಗಟಾಗಿ ಅಲ್ಲಗಳೆದ. ಅದೆಲ್ಲ ಇವಳ ಭ್ರಮೆಯಷ್ಟೆ ಎಂದ. ಕಾರಣ? ಹಳ್ಳಿಯಿಂದ ನಗರದ ಬದುಕಿಗೆ ಕಾಲಿಟ್ಟಿದ್ದಾಳೆ. ಕೆಲಸವಿಲ್ಲದೆ ಮನೆಯಲ್ಲಿ ಇದ್ದಾಳೆ. ವಯಸ್ಸಾದ ಅತ್ತೆಮಾವಂದಿರನ್ನು ನೋಡಿಕೊಳ್ಳುವ ಹೊಣೆ ಹೊತ್ತಿದ್ದಾಳೆ. ಇದೆಲ್ಲ ಅವಳ ಮೇಲೆ ನೇತ್ಯಾತ್ಮಕ ಪರಿಣಾಮ ಬೀರುತ್ತಿದೆ. ಹಾಗಾಗಿ ತಾನು ಕಂಡಿದ್ದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ತಿರುಚಿಕೊಂಡು ನಂಬುತ್ತಾಳೆ. ಅಷ್ಟಲ್ಲದೆ, ತಮ್ಮ ಕಲಹ ತಮ್ಮಿಬ್ಬರಿಗೇ ಬಿಟ್ಟ ವಿಷಯ, ತಾವೇ ಬಗೆಹರಿಸಿಕೊಳ್ಳುತ್ತೇವೆ. ಯಾರ ಸಹಾಯವೂ ಬೇಕಿಲ್ಲ ಎಂದ. ಅಷ್ಟಿದ್ದರೂ ನನ್ನಲ್ಲಿ ಬಂದಿದ್ದಾರೆ ಎಂದರೆ ಅವನ ಬಗೆಹರಿಸುವ ವಿಧಾನಗಳು ಅವಳಿಗೆ ಹಿಡಿಸಿಲ್ಲವೋ, ಅಥವಾ ಸಮಸ್ಯೆಯು ಅವನ ತಿಳಿವಳಿಕೆಯನ್ನು ಮೀರಿದೆಯೋ ಹೇಗೆ ಎಂಬುದಕ್ಕೆ ಮಗುಮ್ಮಾಗಿದ್ದ.

ವೀಸಾದ ಬಗೆಗೆ ಸುಳ್ಳು ಹೇಳಿದ್ದನ್ನು ಕೀರ್ತಿ ಎತ್ತಿದಳು. ಕಿಶೋರ ಸಮರ್ಥಿಸಿಕೊಳ್ಳುತ್ತ, ಅವಮಾನದಿಂದ ರಕ್ಷಿಸಿಕೊಳ್ಳಲು ನಿರಪಾಯಕರ ಸುಳ್ಳು ಹೇಳುವುದು ಕೆಟ್ಟದ್ದಲ್ಲ ಎಂದ. (ಅವನ ತಾಯಿಯು, 'ಕಿಶೋರ ಎಷ್ಟು ಚೆನ್ನಾಗಿ ಸುಳ್ಳು ಹೇಳುತ್ತಾನೆ!' ಎಂದು ಮೆಚ್ಚಿದ್ದನ್ನು ಕೀರ್ತಿ ಹಂಚಿಕೊಂಡಿದ್ದು ನೆನಪಾಯಿತು.) ಅದಿರಲಿ, ವಿದೇಶ ಪ್ರಯಾಣದ ಸದವಕಾಶ ತಪ್ಪಿದ್ದಕ್ಕೆ ಏನೆನ್ನಿಸುತ್ತದೆ ಎಂದು ಕೇಳಿದ್ದಕ್ಕೆ ತನಗೇನೂ ಬೇಜಾರಿಲ್ಲ ಎಂದು ಸಮರ್ಥಿಸಿಕೊಂಡ. ಅದರರ್ಥ ಅವನಿಗೆ ಬೇಜಾರಾಗಿದೆ, ಹಾಗೂ ಅದನ್ನು ಅಲ್ಲಗಳೆಯುತ್ತಿದ್ದಾನೆ ಎಂದುಕೊಂಡೆ.

ದಿಲ್ಲಿಯ ಪ್ರಯಾಣದ ಟಿಕೆಟ್ ವಿಷಯ ಬಂತು. ಸ್ನೇಹಿತನ ಮನೆಯಲ್ಲಿ ಟಿಕೆಟ್ ಇದೆ ಎಂದವನು ಹತ್ತು ದಿನವಾದರೂ ತೋರಿಸಲಿಲ್ಲ, ಹೇಗೆ ನಂಬುವುದು ಎಂದು ಕೀರ್ತಿ ಹೇಳಿದಳು. ಹನ್ನೆರಡನೆಯ ದಿನ ತೋರಿಸಿದ್ದನ್ನು ಕಿಶೋರ ಎತ್ತಿಹೇಳಿ, 'ನಾನು ಸುಳ್ಳು ಹೇಳುವುದಿಲ್ಲ ಅಂತ ಈಗಲಾದರೂ ಗೊತ್ತಾಯಿತೆ?' ಎಂದು, ಅವಳನ್ನು ಸಣ್ಣವಳನ್ನಾಗಿ ಮಾಡಿದ. ಕೀರ್ತಿ ಪೆಚ್ಚಾದಳು. ನಾನು, 'ಅದು ಸರಿ, ಹತ್ತುದಿನ ಗಮನ ಕೊಡಲಿಲ್ಲವಲ್ಲ, ಅದಕ್ಕೇನು ಕಾರಣ ಇರಬಹುದು?' ಎಂದೆ. ಅವನು ಕೆಲಸದ ಒತ್ತಡ ಇತ್ಯಾದಿ ಹೇಳುತ್ತಿರುವಾಗ ಮುಖಭಾವ ಬೇರೇನೋ ಹೇಳುತ್ತಿತ್ತು. ಅದರ ಬಗೆಗೆ ಕೀರ್ತಿಗೆ ಕೇಳಿದಾಗ ಹೇಳಿದಳು. 'ನನ್ನ ವೈಯಕ್ತಿಕ ವಿಷಯಗಳನ್ನು ಕೇಳುವ ಹಕ್ಕು ನಿನಗಿಲ್ಲ. ನನ್ನ ನಡತೆಯ ಸತ್ಯಾಸತ್ಯತೆಯನ್ನು ಪ್ರಶ್ನಿಸಿದರೆ ನಿನ್ನನ್ನು ದೂರ ಮಾಡುತ್ತೇನೆ ಎನ್ನುವಂತಿದ್ದಾನೆ.' ಪರಿಣಾಮ ಅವಳಿಗೆ ಏನು ಅನ್ನಿಸುತ್ತಿದೆ? ತಾನು ಆತ್ಮೀಯಳಾಗಲು ಹೊರಟರೆ ಆತ ಇಬ್ಬರ ನಡುವೆ ಗೆರೆ ಎಳೆದು, ಇದನ್ನು ದಾಟಕೂಡದು ಎನ್ನುತ್ತಿದ್ದಾನೆ. ಅವನ ದೃಷ್ಟಿಯಲ್ಲಿ ತಾನು ಬೆಲೆಯಿಲ್ಲದವಳು, ತನ್ನೊಡನೆ ಬಾಂಧವ್ಯ ಬೆಳೆಸುವ ವಿಚಾರವೇ ಅರ್ಥಹೀನ ಎನ್ನುತ್ತಿದ್ದಾನೆ. ಇದರಿಂದ ಆಕೆಗೆ ಹೇಳತೀರದ ಸಂಕಟ ಆಗುತ್ತಿದೆ. ಛೆ, ಇವನನ್ನು ಮದುವೆ ಆಗಲೇಬಾರದಿತ್ತು ಎಂದಳು.

ಕಿಶೋರ ಕೀರ್ತಿಗೆ ಸ್ಪಂದಿಸದೆ ಬಿಗುವಾಗಿದ್ದನ್ನು ಗಮನಿಸಿದೆ. ಇಂಥ ವರ್ತನೆಯ ಮೂಲಕಾರಣವನ್ನು ವಿವರಿಸಿದೆ. ಎಲ್ಲರಿಗೂ ಹುಟ್ಟಿನಿಂದ ಕೋಮಲ ಭಾವನೆಗಳೇ ಇರುತ್ತವೆ. ಬೆಳೆಯುವಾಗ ಹೆಚ್ಚಿನವರು ಅವಹೇಳನಕ್ಕೆ ಗುರಿಯಾಗುತ್ತಾರೆ. ಆಗ ಕೋಮಲತೆ ಮಾಯವಾಗಿ, ಒರಟುತನ, ಅಪ್ರಾಮಾಣಿಕತೆ, ನಂಬದಿರುವಿಕೆ ಇತ್ಯಾದಿ ಹುಟ್ಟಿ 'ಚರ್ಮ ದಪ್ಪವಾಗಿ' ಆತ್ಮರಕ್ಷಣೆ ಮಾಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಆತ್ಮೀಯತೆ ಹುಟ್ಟುವುದಕ್ಕೆ ನಿಸ್ಪೃಹ ಮನಸ್ಸು, ಕೋಮಲ ಭಾವ ಅತ್ಯಗತ್ಯ. ಆದರೆ ಒಂದುಕಾಲದಲ್ಲಿ ಅಗತ್ಯವಾಗಿದ್ದ ಗುಣಗಳು ಈಗ ನಿಷ್ಪ್ರಯೋಜಕ ಎನ್ನಿಸಿದರೂ ಬಿಟ್ಟುಕೊಡಲು ಮನಸ್ಸು ಒಪ್ಪುವುದಿಲ್ಲ. (ಉದಾ. ಮಕ್ಕಳಿರುವಾಗ ತೀವ್ರ ಭಯಪಟ್ಟವರು ಬೆಳೆದ ನಂತರವೂ ಹೆತ್ತವರಿಂದ ದೂರವಾಗಿ ಮಲಗಲು ಇಷ್ಟಪಡುವುದಿಲ್ಲ.) ಹೀಗೆ ಕಿಶೋರನ ಅಪ್ರಾಮಾಣಿತೆಯ 'ಸಹಜೀಕರಣ' ಮಾಡಿ, ಇಬ್ಬರ ಅನಿಸಿಕೆಯನ್ನು ಕೇಳಿದೆ. ಕಿಶೋರ ತನ್ನ ಸತ್ಯಕ್ಕೇ ಅಂಟಿಕೊಂಡು ಆಕೆಯದು ಭ್ರಮೆಯೆಂದ. ಕೀರ್ತಿ ನನ್ನ ವಿವರಣೆಯನ್ನು ಒಪ್ಪಲಿಲ್ಲ. ಕಿಶೋರ ಸುಳ್ಳು ಆಡುವುದು, ಒಳಗೊಂದು ಹೊರಗೊಂದು ಮಾಡುವುದು ಖಂಡಿತವಾಗಿಯೂ ತನ್ನ ಕಲ್ಪನೆಯಲ್ಲ, ಅದು ಅನ್ಯೋನ್ಯತೆಗೆ ಅಡ್ಡಿಯಾಗುತ್ತಿದೆ ಎಂದು ಮನಗಾಣಿಸಬೇಕು ಎಂದು ಒತ್ತಾಯಿಸಿದಳು. ಕಿಶೋರ, ಇದನ್ನು ಮನೆಯಲ್ಲೇ ಬಗೆಹರಿಸಿಕೊಳ್ಳೋಣ, ಇಲ್ಲಿದ್ದು ಡಾಕ್ಟರರ ಸಮಯ ಹಾಳುಮಾಡುವುದು ಬೇಡ, ಅವರಿಗೆ ಬೇರೆ ಪೇಶಂಟ್ಸ್ ಕಾಯುತ್ತಿದ್ದಾರೆ ಎಂದ. ಅವನ ಮಾತಿನ ಠೀವಿಯನ್ನು ಕಂಡು ಅಚ್ಚರಿಪಡುತ್ತಿರುವಾಗ ಒಂದು ವಿಚಿತ್ರ ನಡೆಯಿತು.

ಕೀರ್ತಿ ಸರಕ್ಕನೆ ಜಾಗಬಿಟ್ಟು ಕಿಶೋರನ ಕಾಲುಗಳಿಗೆ ತಾಗುವಂತೆ ನೆಲಹಾಸಿನ ಮೇಲೆ ಕುಳಿತಳು. ತನ್ನ ಮುಖವನ್ನು ಅವನ ಮಡಿಲಲ್ಲಿ ಹುದುಗಿಸಿ, ತೋಳುಗಳಿಂದ ಅವನನ್ನು ತಬ್ಬಿಕೊಳ್ಳುತ್ತ 'ಐ ಲವ್ ಯೂ ಕಣೋ. ನನ್ನನ್ನು ಅರ್ಥಮಾಡಿಕೋ...' ಎಂದು ಬಿಕ್ಕಿಬಿಕ್ಕಿ ಅಳಲು ಆರಂಭಿಸಿದಳು!

ಕಿಶೋರನ ಪ್ರತಿಕ್ರಿಯೆ ಏನಿತ್ತು? ಅವನು ಗಲಿಬಿಲಿಗೊಂಡರೂ ನಿಶ್ಚಲನಾಗಿ ಬಿಗುವಾಗಿ ಕುಳಿತಿದ್ದ. ಕೀರ್ತಿಯನ್ನು ಅಪ್ಪಿತಪ್ಪಿಯೂ ಮುಟ್ಟಲಿಲ್ಲ. ಸ್ವಲ್ಪ ಹೊತ್ತಾದ ನಂತರ, 'ಸಾಕು ಏಳು' ಎಂದು ಅವಳನ್ನು ಜರುಗಿಸಲು ಹವಣಿಸಿದ. ಎದ್ದು ಹೊರಗೆ ನಡೆಯುವವನನ್ನು ಕೀರ್ತಿಯು ಹತಾಶೆಯಿಂದ ನೋಡುತ್ತಿರುವಾಗ ನಾನು ಸಾಂತ್ವನದ ಸ್ವರದಿಂದ ಹೇಳಿದೆ:

'ಕೀರ್ತಿ, ನಿಮಗೆ ವೈಯಕ್ತಿಕ ಚಿಕಿತ್ಸೆ ಬೇಕು.'

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ).